ಬೆಳೆಗಳಿಗೆ ೨–೩ ಇಂಚು ನೀರು ಬಿಡಬೇಕಾದ ಅಗತ್ಯ ಇಲ್ಲ. ನಮ್ಮ ರಾಯಚೂರು ಜಿಲ್ಲೆಯಲ್ಲಿರತಕ್ಕಂಥ ಎರೆ ಪ್ರದೇಶದಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕಪ್ಪು ಭೂಮಿ ಇರತಕ್ಕ ಪ್ರದೇಶಗಳಲ್ಲಿ ಹೆಚ್ಚು ನೀರು ಉಪಯೋಗಿಸಿರುವುದರ ಪರಿಣಾಮವಾಗಿ, ಅಲ್ಲಿಯ ಭೂಮಿ ಜಾಳು ಮತ್ತು ಕ್ಷಾರಕ್ಕೆ ಗುರಿಯಾಗಿರುತ್ತದೆ. ಇದೇರೀತಿ ಚಿಕ್ಕಮಗಳೂರು, ಮಲೆನಾಡು ಪ್ರದೇಶ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯ ಪ್ರದೇಶಗಳಲ್ಲಿ ಈ ಒಂದು ಆವಶ್ಯಕತೆಯ ದೊಡ್ಡ ಪ್ರಶ್ನೆ ಇದೆ. ಇವುಗಳನ್ನು ವ್ಯಾಪಕವಾಗಿ ಅಭಿವೃದ್ಧಿ ಮಾಡಬೇಕೆಂದು ಸಮಗ್ರವಾದ ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಕೆಳಗೆ, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ, ಕೇಂದ್ರ ಸರ್ಕಾರದವರು, ಸೂಪರ್ ಪಾಸ್ಫೇಟ್, ರಾಕ್ ಪಾಸ್ಫೇಟ್ ಗೊಬ್ಬರಗಳನ್ನು ಕೊಳ್ಳುವುದಕ್ಕೆ ಸಹಾಯಧನ ಕೊಡುತ್ತಿದ್ದರು. ಈಗ ಕೇಂದ್ರ ಸರ್ಕಾರದವರು ಸಹಾಯಧನವನ್ನು ನಿಲ್ಲಿಸಿರುವುದರಿಂದ, ರಾಜ್ಯ ಸರ್ಕಾರದ ಸಂಪನ್ಮೂಲಗಳ ಇತಿಮಿತಿಯಲ್ಲಿ ಅಷ್ಟು ವ್ಯಾಪಕವಾಗಿ ಮಾಡಲು ಸಾಧ್ಯವಾಗುತ್ತಿಲ್ಲ. ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆಗಳು ಬಹಳ ಉಪಯುಕ್ತವಾಗಿವೆ. ಇವುಗಳಿಗೆ ನಮ್ಮಲ್ಲಿರತಕ್ಕ ಇತಿಮಿತಿಗಳ ವ್ಯಾಪ್ತಿಯಲ್ಲಿ ನಾವೇ ಅತ್ಯಂತ ವ್ಯಾಪಕವಾಗಿ ಮಾಡುವಂತಹ ಕಾರ್ಯಕ್ರಮಗಳ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಕೇಂದ್ರ ಸರ್ಕಾರದಿಂದ ಹೆಚ್ಚಿನ ನೆರವಿಗಾಗಿ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಈ ಸದನದ ಮೂಲಕ ಹಾಗೂ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಡಿ. ಜಿ. ಬಸವನಗೌಡ.—ಇದುವರೆಗೂ ಏಕೆ ಯೋಜನೆಯನ್ನು ತಯಾರು ಮಾಡಿಲ್ಲ ?

ಶ್ರೀ ಎಂ. ಪಿ. ಪ್ರಕಾಶ್.—ಈಗಾಗಲೇ ಖರ್ಚಿನ ಯೋಜನೆ ತಯಾರಾಗಿದೆ. ಕೇಂದ್ರ ಸರ್ಕಾರದಿಂದ ಹೆಚ್ಚಿನ ಹಣಕಾಸಿನ ನೆರವಿಗಾಗಿ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದೇನೆ.

ಶ್ರೀ ಮೊಹಮದ್ ಮೊಯಿನುದ್ದೀನ್.—ರೆಮಿಡಿಯಲ್ ಮೆಸರ್ಸ್‌ಗೆ ಎಷ್ಟು ಹಣ ಹಾಕಿದ್ದೀರಿ ? ಎಷ್ಟು ಖರ್ಚು ಮಾಡಿದ್ದೀರಿ ಅದರ ಬಗ್ಗೆ ಪಟ್ಟಿ ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಎಂ. ಪಿ. ಪ್ರಕಾಶ್.—ಹಿಂದೆ ಕಳುಹಿಸಿರತಕ್ಕ ಪ್ರಶ್ನೆಗಳಿಗೆ, ತಾಲ್ಲೂಕುವಾರು ಖರ್ಚಿನ ವಿವರಗಳನ್ನು ಕಳುಹಿಸಿಕೊಟ್ಟಿದ್ದೇನೆ. ಬೇರೆ ಬೇರೆ ವಿಚಾರಗಳ ಬಗ್ಗೆ ಅಂದರೆ ಕ್ಷಾರ, ಜಾಳು ಆಗಿರತಕ್ಕಂಥ ಪ್ರದೇಶಗಳ ಬಗ್ಗೆ ಕೇಳಿದ್ದಾರೆ, ಇದನ್ನು ನಂತರ ಕಳುಹಿಸಿಕೊಡುತ್ತೇನೆ.

ಶ್ರೀ ಮೊಹಮದ್ ಮೊಯಿನುದ್ದೀನ್.—ಕೊಟ್ಟಿರುವ ಪಟ್ಟಿಯಲ್ಲಿ ತಾಲ್ಲೂಕು ವೈಸ್ ಕೇಳಿದ್ದರೂ, ತಾಲ್ಲೂಕು ವೈಸ್ ಸರ್ವೆ ಮಾಡಿಲ್ಲ. ಡಿಸ್ಟ್ರಿಕ್ಟ್ ವೈಸ್ ಕೊಟ್ಟಿದ್ದಾರೆ. ಇದರಲ್ಲಿ ಕೆಲವು ಕಡೆ ನಿಲ್, ನಿಲ್ ಎಂದು ಹಾಕಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ೨೩ ಸಾವಿರ ಎಕರೆ ಎಂದು ಕೊಟ್ಟಿದ್ದಾರೆ. ಇದು ನಮಗೆ ಆಶ್ಚರ್ಯವಾಗುತ್ತದೆ.

ANNOUNCEMENT

MR. SPEAKER.—The Business Advisory Committee which met to-day recommneded to transact the business in the House as follows.—

12-2-1986	–	No sitting
13-2-1986	–	Legislative Business – Consideration and passing of Bills.
14-2-1986	–	Discussion under Rule 301 on a matter arising out of the High Court Jndgement in respect of Bottling contract.

15-2-1986 & 16-2-1986	–	Holiday
17-2-1986	–	No Question Hour. Presentation of Budget.
18-2-1986 to 21-21986		General discussion on Budget & reply thereon.
22-2-1986	–	Discussion on rise in prices of Essential Commodities.
23-2-1986	–	Holiday
24-2-1986 to 1-3-1986		Discussion and voting on the Demands for Grants for the year 1986-87.
2-3-1986	–	Holiday
3-3-1986 to 5-3-1986	–	Discussion and voting on the Demands for Grants for the year 1986-87
6-3-1986	–	(i) Supplementary Estimates – Discussion and voting on the Demands for Grants for the year 1985-86. (ii) Discussion and voting on the Demands for Grants for the year 1986-87.
7-3-1986	–	Discussion and voting on the Demands for the Grants for the year 1986-87.
8-3-1986 & 9-3-1986	–	Holidays.
10-3-1986 to 14-3-1986	–	Discussion and voting on the Demands for Grants for the year 1986-87.
15-3-1986	–	Legislative Business Introduction, consideration and passing of Appropriation Bills.

MR. SPEAKER.—The House now stands adjourned to meet again at 11-00 A. M. on 13-2-1986.

(The House adjourned at Thirty-seven Minutes past Five of the Clock to meet again at Eleven of the Clock on Thursday, the 13th day of February, 1986.)

* * * * *